ಕರ್ನಾಟಕ ಉಚ್ಚ ನ್ಯಾಯಾಲಯ

(ಕಲಬುರ್ಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ. ಕೃಷ್ಣಭಟ್

ಸುಭಾಶ್ ಮತ್ತು ಇನ್ನೊಬ್ಬರು -ವಿರುದ್ಧ ಕರ್ನಾಟಕ ರಾಜ್ಯ, ಇಂಡಿ ಪೊಲೀಸ್ ಠಾಣೆ

ಕ್ರಿಮಿನಲ್ ಅಪೀಲುಸಂಖ್ಯೆ: 3528/2013,ದಿನಾಂಕ: 24 ನೇ ಜುಲೈ, 2020

ತೀರ್ಪು

ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್:

“ಸಿಆರ್‌ಪಿಸಿ'ಯ 374 ( 2) ನೇ ಪ್ರಕರಣದ ಅಡಿಯಲ್ಲಿ ಹೂಡಲಾದ ಈ ಕ್ರಿಮಿನಲ್ ಅಪೀಲನ್ನು, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 302 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪಿ ಅಪೀಲುದಾರರನ್ನು ಜೀವಾವಧಿ ಕಾರಾವಾಸದ ಶಿಕ್ಷೆಗೆ ಗುರಿಪಡಿಸಿ ಮತ್ತು ತಲಾ ರೂ .15,000/- ದಂಡವನ್ನು ವಿಧಿಸಿ, ಬಿಜಾಪುರದ I ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯವು ಸೆಷನ್ಸ್ ಕೇಸ್ ನಂಬರ್ .18/2011 ರಲ್ಲಿ ಅಪರಾಧವನ್ನು ನಿರ್ಣಯಿಸಿ ನೀಡಿರುವ ತೀರ್ಪಿನ ವಿರುದ್ಧ ನಿರ್ದೇಶಿಸಲಾಗಿದೆ.

2. ಪ್ರಾಸಿಕ್ಯೂಷನ್ನ ವಾದವೆಂದರೆ, ಶರಣಪ್ಪ ಸಿದ್ರಾಮಪ್ಪ ಬಿಸನಾಳ್ (ಪಿಡಬ್ಲ್ಯೂ .11) ಎಂಬುವವರು ತನ್ನ ಮಗಳು ಕಮಲಾಬಾಯಿ ಮತ್ತು ತಮ್ಮ ಅಳಿಯ ಗೋರ್ನಾಲ್ ಗ್ರಾಮದಲ್ಲಿ ವಾಸವಿದ್ದರು.ಸುಮಾರು 20 ವರ್ಷಗಳ ಹಿಂದೆ ಕಮಲಾಬಾಯಿಯನ್ನು ದುಂಡಪ್ಪನಿಗೆ ಮದುವೆ ಮಾಡಿಕೊಡಲಾಗಿತ್ತು ಮತ್ತು ಅವರಿಗೆ ನಾಲ್ವರು ಮಕ್ಕಳಿದ್ದರು.ಇಬ್ಬರು ಹೆಣ್ಣುಮಕ್ಕಳಿಗೂ ಮದುವೆಯಾಗಿದ್ದು, ಅವರವರ ಗಂಡನ ಮನೆಯಲ್ಲಿ ವಾಸಿಸುತ್ತಿದ್ದರು.ಇಬ್ಬರು ಗಂಡುಮಕ್ಕಳು ಅವಿವಾಹಿತರಾಗಿದ್ದು, ಕೃಷಿಭೂಮಿಯಲ್ಲಿ ತಮ್ಮ ತಂದೆಗೆ ಸಹಾಯ ಮಾಡುತ್ತಿದ್ದರು.ಅಳಿಯ ದುಂಡಪ್ಪನೂ ಸಹ ಮಲಕಪ್ಪ ಗುರುಸಿದ್ದಪ್ಪ ಗಂಗನಳ್ಳಿ (ಪಿಡಬ್ಲ್ಯೂ 3) ರವರ ಕೃಷಿ ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದನು.ದಿನಾಂಕ: 30.07.2010 ರಂದು ಸಂಜೆ ಸುಮಾರು 6.00 ಗಂಟೆಗೆ ಶಿವಪ್ಪ ಪರಸಪ್ಪ ತಲವಾರ್ (ಪಿ.ಡಬ್ಲ್ಯೂ .2) ವಿಠಲ್ ತುಕಾರಾಂ ಕಾನೂರ್ ಎಂಬಾತನಿಗೆ ದೂರವಾಣಿ ಕರೆ ಮಾಡಿ, ಶರಣಪ್ಪನಿಗೆ (ಪಿ.ಡಬ್ಲ್ಯೂ .11) ಮಗಳು ಕಮಲಾಬಾಯಿ ಕೊಲೆಯಾಗಿದ್ದಾಳೆಂದು ಅವನಿಗೆ ತಿಳಿಸುವಂತೆ ಕೇಳಿಕೊಂಡನು.ಆ ಸುದ್ದಿಯನ್ನು ಕೇಳಿದ ಕೂಡಲೇ ಪಿ.ಡಬ್ಲ್ಯೂ .11 ತನ್ನ ಕುಟುಂಬ ಸದಸ್ಯರೊಂದಿಗೆ ಗೋರ್ನಾಲ್ ಗ್ರಾಮಕ್ಕೆ ತೆರಳಿದನು.ಅವರು ಅಲ್ಲಿಗೆ ಬಂದಾಗ, ಅವರನ್ನು ಸಿದ್ದಯ್ಯ ಕಲ್ಯಾಣಯ್ಯ ಹಿರೇಮಗೆ ಸೇರಿದ ಭೂಮಿಗೆ ಕರೆದೊಯ್ಯಲಾಯಿತು.ಅವರು ಅಲ್ಲಿ ಕಮಲಾಬಾಯಿಯ ಮೃತದೇಹವನ್ನು ಕಂಡರು.ಕುತ್ತಿಗೆಯ ಮೇಲೆ ದೊಡ್ಡ ಗಾಯವಾಗಿತ್ತು ಮತ್ತು ಆ ಸ್ಥಳವು ರಕ್ತಸಿಕ್ತವಾಗಿತ್ತು.ಪಿ.ಡಬ್ಲ್ಯೂ .11 ತನ್ನ ಅಳಿಯ ದುಂಡಪ್ಪನನ್ನು ವಿಚಾರಿಸಿದಾಗ, ಆತನು, ಬೆಳಿಗ್ಗೆ ಸುಮಾರು 9.30 ಗಂಟೆಯಲ್ಲಿ, ತಾನು ಕೆಲಸ ಮಾಡುತ್ತಿದ್ದ ೧ ಮಲಕಪ್ಪ ಗಂಗನಳ್ಳಿಯ ಜಮೀನಿನಲ್ಲಿ ತನಗೆ ಕಮಲಾಬಾಯಿ ಊಟ ತಂದಿದ್ದಳು.ಅವಳು ತನ್ನ ಗಂಡ ದುಂಡಪ್ಪನಿಗೆ ಊಟ ಕೊಟ್ಟು, ಗ್ರಾಮದಲ್ಲಿ ಜಾತ್ರೆ ನಡೆಯುತ್ತಿದೆಯೆಂದು, ಆತನೂ ಬೇಗನೆ ಹಿಂದಿರುಗಬೇಕೆಂದೂ ಹೇಳುತ್ತಾ, ತಮ್ಮ ಹೊಲದ ಕಡೆ ಹೊರಟಳು.ದುಂಡಪ್ಪನು ತನ್ನ ದೈನಂದಿನ ಕೆಲಸವನ್ನು ಪೂರ್ಣಗೊಳಿಸಿ, ಸಂಜೆ ಸುಮಾರು 5.30 ಗಂಟೆಗೆ ತಮ್ಮ ಹೊಲದ ಕಡೆಗೆ ಹಿಂದಿರುಗುವಾಗ, ಆತನು ಕಮಲಾಬಾಯಿಯ ಮೃತ ದೇಹವನ್ನು ಕಂಡನು.ಅವನು ಜೋರಾಗಿ ಕೂಗಿಕೊಂಡಾಗ, ನೆರೆಹೊರೆಯ ಜನರು ಸ್ಥಳಕ್ಕೆ ಬಂದರು ಎಂದು ವಿವರಿಸಿ, ಬಿಜಾಪುರದ ಇಂಡಿ ಪೊಲೀಸ್ ಠಾಣೆಯಲ್ಲಿದಿನಾಂಕ: 31.07.2010 ರಂದು ಸಂಜೆ 6.00 ಗಂಟೆಗೆ ದೂರನ್ನು ದಾಖಲಿಸಿದನು.

3. ದುಂಡಪ್ಪ ಮತ್ತು ಅವನ ಸೋದರ ಸಂಬಂಧಿ ಸುಭಾಶ್, ಸಿದ್ರಾಮ್ ತಲವಾರ್ನ ( 1 ನೇ ಆರೋಪಿ) ಮಗ-ಇವರಿಬ್ಬರ ನಡುವೆ ಜಮೀನುಗಳ ಎಲ್ಲೆಗೆ ಸಂಬಂಧಿಸಿದಂತೆ ದ್ವೇಷವಿತ್ತು.ಆದುದರಿಂದ, ಸುಭಾಶ್ ಮತ್ತು ಅವನ

ಸಹಚರರು ಕಮಲಾಬಾಯಿಯನ್ನು ಹರಿತವಾದ ಆಯುಧದಿಂದ ಇರಿದು ಈ ಅಪರಾಧವನ್ನು ಎಸಗಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.ಸುಭಾಶ್ (ಎ) ಮತ್ತು ಅವನ ಸಹಚರರು ಅಪರಾಧ ಎಸಗಿದ್ದಾರೆಂದು ಅವನು ಅನುಮಾನಿಸಿದ್ದಾನೆ.ಆದ್ದರಿಂದ, ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ.

4. ಮರುದಿನ ಎಂದರೆ, 31.07.2010 ರಂದು ಬೆಳಿಗ್ಗೆ ಸುಮಾರು 7.00 ಗಂಟೆಗೆ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲಾಯಿತು.ರಾತ್ರಿ ಸುಮಾರು 10.15 ಗಂಟೆಗೆ ಎಫ್ಐಆರ್ ಅನ್ನು ನ್ಯಾಯಾಲಯವು ಸ್ವೀಕರಿಸಿತು.ದೂರು ಸ್ವೀಕರಿಸಿದ ನಂತರ ಅಪರಾಧ ಸಂಖ್ಯೆ .125/2010 ರಲ್ಲಿ ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 302 ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳಿಗಾಗಿ ಇಂಡಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಯಿತು.ತನಿಖೆಯ ಸಮಯದಲ್ಲಿ, ಇದರಲ್ಲಿನ ಆರೋಪಿಗಳನ್ನು/ಅಪೀಲುದಾರರನ್ನು ಬಂಧಿಸಲಾಯಿತು ಮತ್ತು ಅವರನ್ನು ನ್ಯಾಯವ್ಯಾಪ್ತಿಯ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾಯಿತು ಮತ್ತು ಆ ನಂತರ ನ್ಯಾಯಾಂಗ ಬಂಧನಕ್ಕೆ ನೀಡಲಾಯಿತು.ಅಧಿವಿಚಾರಣೆಯ ಅವಧಿಯಲ್ಲಿ 1 ನೇ ಅಪೀಲುದಾರನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.2 ನೇ ಅಪೀಲುದಾರನನ್ನು ನ್ಯಾಯಾಂಗ ಬಂಧನದಲ್ಲಿ ಮುಂದುವರೆಸಲಾಯಿತು.ಪ್ರಾಸಿಕ್ಯೂಷನ್ 25 ಸಾಕ್ಷಿಗಳನ್ನು ಪರೀಕ್ಷಿಸಿತು ಮತ್ತು 21 ದಾಖಲೆಗಳನ್ನು ನಿಶಾನೆ ಪಿ.1 ರಿಂದ 21 ಎಂಬುದಾಗಿ ಮತ್ತು ಮುದ್ದೆ ಮಾಲು 1 ರಿಂದ 7 ಎಂದು ಗುರುತಿಸಿತು.ಆರೋಪಿಗಳ ಪ್ರತಿವಾದವು ಸಂಪೂರ್ಣವಾಗಿ ನಿರಾಕರಿಸಿದ್ದಾಗಿತ್ತು.ಆರೋಪಿಗಳು ಯಾವುದೇ ಪ್ರತಿವಾದ ಸಾಕ್ಷ್ಯವನ್ನು ಮುನ್ನಡೆಸಲು ಆಯ್ಕೆ ಮಾಡಲಿಲ್ಲ.

5. ತನಿಖೆಯ ಪ್ರಕಾರ, ಅಪರಾಧಕ್ಕೆ ಸಂಬಂಧಿಸಿದಂತೆ ಮೂವರು ಸಾಕ್ಷಿದಾರರಿದ್ದರು ಎಂಬುದನ್ನು ಗಮನಿಸುವುದು ಮುಖ್ಯ.ಅವರೆಂದರೆ, ಮೃತಳ ಮತ್ತು ದುಂಡಪ್ಪನ ಇಬ್ಬರು ಮಕ್ಕಳಾದ ವಿಠಲ್ ಮತ್ತು ಮಂಜುನಾಥ್ (ಪಿಡಬ್ಲ್ಯು .12 ಮತ್ತು 13), ಹಾಗೂ ಸಿದ್ದಪ್ಪ ಬಸಪ್ಪ ಹಚಡದ (ಪಿಡಬ್ಲ್ಯು .8), ಪಿಡಬ್ಲ್ಯು .8 ಸಿದ್ದಪ್ಪ ಬಸಪ್ಪ ಹಚಡದ ಪ್ರತಿಕೂಲ ಸಾಕ್ಷಿಯಾಗಿ ಬದಲಾಗಿದ್ದ.ಅವನ ಪಾಟೀಸವಾಲಿನಲ್ಲಿ ಅವನು,ದಿನಾಂಕ: 30.07.2010 ರಂದು ಬೆಳಿಗ್ಗೆ 10.00 ಗಂಟೆಗೆ, ಕಮಲಾಬಾಯಿಯ ಕಿರುಚಾಟ ಕೇಳಿಸಿ, ತಾನು ಸ್ಥಳಕ್ಕೆ ಧಾವಿಸಿದ್ದೆನೆಂದು, 2 ನೇ ಆರೋಪಿ ಎರಡನೇ ಏಟು ಹಾಕಿದಾಗ ಕಮಲಾಬಾಯಿ ಕುಸಿದುಬೀಳುತ್ತಿದ್ದುದನ್ನು ನೋಡಿದ್ದೆನೆಂದು, ಮತ್ತು ಅದೇ ಸಮಯದಲ್ಲಿ, ಮೃತಳ ಇಬ್ಬರು ಗಂಡುಮಕ್ಕಳು ಘಟನೆ ನಡೆಯುತ್ತಿದ್ದ ಸ್ಥಳಕ್ಕೆ ಬಂದಾಗ, 2 ನೇ ಆರೋಪಿಯು ಕೊಡಲಿಯನ್ನು ಝಳಪಿಸುತ್ತಿದ್ದುದರಿಂದ ಎಲ್ಲಾ ಮೂವರು ಸಾಕ್ಷಿಗಳು ಸ್ಥಳದಿಂದ ಓಡಿಹೋದರೆಂದು ಪೊಲೀಸರ ಮುಂದೆದಿನಾಂಕ: 31.7.2010 ರಂದು ಹೇಳಿಕೆಯನ್ನು ನೀಡಿದ್ದೆನೆಂಬ ಸಂಗತಿಯನ್ನು ಅವನ ಮುಂದಿಟ್ಟಾಗ, ಅವನು ಪೊಲೀಸರ ಮುಂದೆ ಹಾಗೆ ಹೇಳಿಕೆ ನೀಡಿದ್ದನ್ನು ನಿರಾಕರಿಸಿದ.ಆರೋಪಿಗಳ ಕೈಯಲ್ಲಿ ಪ್ರಾಣವನ್ನು ಕಳೆದುಕೊಳ್ಳುವ ಭೀತಿಯಿಂದ ಅವನು ಹೇಳಿಕೆಯಿಂದ ಹಿಂದೆ ಸರಿಯುತ್ತಿದ್ದಾನೆ ಎಂಬ ಸೂಚನೆಯನ್ನು ಅವನು ನಿರಾಕರಿಸಿದ್ದಾನೆ.

6. ಇಬ್ಬರು ಸಹೋದರರಲ್ಲಿ ಹಿರಿಯವನಾದ 15 ವರ್ಷ ವಯಸ್ಸಿನ ವಿಠಲ್ನ (ಪಿಡಬ್ಲ್ಯು .12) ಪ್ರಕಾರ, ಘಟನೆಯ ದಿನಾಂಕದಂದು ಮೃತ ಕಮಲಾಬಾಯಿ ತನ್ನ ಪತಿ ದುಂಡಪ್ಪನಿಗೆ ಊಟ ಕೊಡಲು, ಅವನು ಕೂಲಿಯಾಗಿ ಕೆಲಸ ಮಾಡುತ್ತಿದ್ದ ಮಲಕಪ್ಪ ಗಂಗನಳ್ಳಿಯ ಜಮೀನಿಗೆ ಹೋಗಿದ್ದಳು.ಕಮಲಾಬಾಯಿ ತನ್ನ ಗಂಡನಿಗೆ ಊಟ ತೆಗೆದುಕೊಂಡು, ಬೆಳಿಗ್ಗೆ ಸುಮಾರು 9.00 ಗಂಟೆಗೆ ಮನೆಯಿಂದ ಹೊರಟಳು.ಆ ನಂತರ, ಇಬ್ಬರು ಸಹೋದರರು ತಮಗೆ ಸೇರಿದ ಜಮೀನಿನಲ್ಲಿ ಕೆಲಸ ಮಾಡಲು ಹೊರಟರು.ಅವರು ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ, ಅವರಿಗೆ ತಮ್ಮ ತಾಯಿಯ ಮತ್ತು ಆರೋಪಿಗಳ ಧ್ವನಿ ಕೇಳಿಸಿತು.ಕೂಡಲೇ ಅವರು ಸ್ಥಳದತ್ತ ಧಾವಿಸಿದರು.1 ನೇ ಅಪೀಲುದಾರನು ' ನಿನ್ನ ದುರಹಂಕಾರ/ಅಸಭ್ಯ ವರ್ತನೆ ನಿನ್ನ ಗಂಡನಿಗಿಂತ ಹೆಚ್ಚಾಗಿದೆ ' ಎಂದೆಲ್ಲ ಅಶ್ಲೀಲ ಭಾಷೆ ಬಳಸಿ, ತಮ್ಮ ತಾಯಿಯನ್ನು ಬೈಯುತ್ತಿದ್ದುದನ್ನು ನೋಡಿದರು.ಕಮಲಾಬಾಯಿಯನ್ನು ಮುಗಿಸುವಂತೆ 1 ನೇ ಅಪೀಲುದಾರನು 2 ನೇ ಅಪೀಲುದಾರನನ್ನು ಪ್ರಚೋದಿಸಿದನು.2 ನೇ ಅಪೀಲುದಾರನು ಕೊಡಲಿಯಿಂದ ಕಮಲಾಬಾಯಿಯ ಕುತ್ತಿಗೆ ಮೇಲೆ ಹಲ್ಲೆ ಮಾಡಿದನು.ಕಮಲಾಬಾಯಿ ನೆಲಕ್ಕೆ ಕುಸಿದು ಬಿದ್ದು, ಚೀರಲಾರಂಭಿಸಿದಳು ಮತ್ತು ಅವನು ಕೊಡಲಿಯಿಂದ ಇನ್ನೊಮ್ಮೆ ಅವಳ ಮೇಲೆ ಹಲ್ಲೆ ಮಾಡಿದನು.ಕಮಲಾಬಾಯಿ ನೆಲಕ್ಕುರುಳಿದಳು.ಅಷ್ಟರಲ್ಲಿ 1 ನೇ ಅಪೀಲುದಾರನು ಕಮಲಾಬಾಯಿಯ ಇಬ್ಬರು ಪುತ್ರರನ್ನು ನೋಡಿದನು.ಅವನು ಮೃತಳ ಗಂಡುಮಕ್ಕಳಿಬ್ಬರನ್ನೂ ಮುಗಿಸಲು 2 ನೇ ಅಪೀಲುದಾರನನ್ನು ಪ್ರಚೋದಿಸಿದನು.2 ನೇ ಅಪೀಲುದಾರನು ಕೊಡಲಿಯನ್ನು ಝಳಪಿಸುತ್ತಾ ವಿಠಲ್ ಮತ್ತು ಮಂಜುನಾಥ್ ಕಡೆ

ಓಡಿದಾಗ, ವಿಠಲ್ ಮತ್ತು ಮಂಜುನಾಥ್ ಇಬ್ಬರೂ ತಮ್ಮ ಪ್ರಾಣ ಉಳಿಸಿಕೊಳ್ಳಲು ಓಡಿಹೋದರು.ಅವರು ಕುಂಬಾರ್ ಎಂಬುವವರ ಜಮೀನಿನ ಕಡೆ ಓಡಿ, ಅಲ್ಲಿ ಮರುದಿನ ಮುಂಜಾನೆಯ ತನಕ ಅಡಗಿಕೊಂಡರು.ಮರುದಿನ ಬೆಳಿಗ್ಗೆ ಅವರು ತಮ್ಮ ಮನೆಗೆ ಮರಳಿದರು.ಏತನ್ಮಧ್ಯೆ, ಅವರ ತಾತ ಪಿಡಬ್ಲ್ಯು .11 ಪೊಲೀಸರ ಮುಂದೆ ದೂರು ದಾಖಲಿಸಿದ್ದರು.ಅವರು ಘಟನೆಯ ಬಗ್ಗೆ ತಮ್ಮ ತಾತನಿಗೆ ಮತ್ತು ತಮ್ಮ ಮಾವನಿಗೆ ಮಾಹಿತಿ ನೀಡಿದರು.ಮಠಪತಿ @ ಹಿರೇಮಠ್ (ಸಿದ್ದಯ್ಯ ಮಠಪತಿ) ರವರ ಜಮೀನಿನಲ್ಲಿ ಈ ಕೊಲೆ ನಡೆದಿದೆ ಎಂದು ಅವರು ತಿಳಿಸಿದರು.ಮಂಜುನಾಥ್ (ಪಿಡಬ್ಲ್ಯು .13) ಕೂಡಾ ಅದೇ ಮಾಹಿತಿಯನ್ನು ತಿಳಿಸಿದನು.

7. ಅಪರಾಧದ ಹಿಂದಿನ ಉದ್ದೇಶವು ಹೊಲದ ಮೇರೆಗೆ ಸಂಬಂಧಪಟ್ಟ ವಿವಾದವಾಗಿರುವುದರಿಂದ, ಪಾಟಿ ಸವಾಲಿನ ಅವಧಿಯಲ್ಲಿ ಪ್ರತಿವಾದಿ ವಕೀಲರು ಕೆಲವು ಮಾಹಿತಿಗಳನ್ನು ಹೊರತೆಗೆದಿದ್ದಾರೆ.ಸಾಕ್ಷಿಗಳಾದ ಪಿಡಬ್ಲ್ಯು.12 ಮತ್ತು 13 ಇವರು ತಮ್ಮ ತಂದೆಗೆ ಸಂಗಪ್ಪ ಎಂಬ ಹೆಸರಿನ ಒಬ್ಬ ಸಹೋದರ ಮಾತ್ರ ಇದ್ದಾರೆ ಎಂದು ಒಪ್ಪಿಕೊಂಡಿದ್ದಾರೆ.1 ನೇ ಅಪೀಲುದಾರನು ದುಂಡಪ್ಪನ ಸೋದರ ಸಂಬಂಧಿ ಸಹೋದರ, 1 ನೇ ಅಪೀಲುದಾರನ ಮೂವರು ಸಹೋದರರ ನಡುವೆ ಕುಟುಂಬದ ಆಸ್ತಿ ವಿಭಜನೆ ಆಗಿತ್ತು ಮತ್ತು ಅವರೆಲ್ಲರೂ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ.1 ನೇ ಅಪೀಲುದಾರ ಮತ್ತು ಅವರ ತಂದೆ ದುಂಡಪ್ಪ ಅವರಿಗೆ ಸೇರಿದ ಕೃಷಿ ಜಮೀನುಗಳಲ್ಲಿ ನೀರು ಪಂಪ್ ಮಾಡಲು ವಿದ್ಯುತ್ ಮೋಟರ್‌ಗಳನ್ನು ಅಳವಡಿಸಲಾಗಿತ್ತು.1 ನೇ ಅಪೀಲುದಾರ ದುಂಡಪ್ಪ ಮತ್ತು ಅವರ ಸಹೋದರರ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಿದ್ದವು.ದುಂಡಪ್ಪ ಮತ್ತು ಅವರ ಸಹೋದರ ಸಂಗಪ್ಪ ಅವರಿಗೆ ಸೇರಿದ ಜಮೀನಿನಲ್ಲಿ ಆರು ವಸತಿ ಮನೆಗಳಿವೆ.ಜಮೀನಿನಲ್ಲಿ ನಿರ್ಮಿಸಲಾದ ಮನೆಗಳಲ್ಲಿ ಆಯಾ ಕುಟುಂಬಗಳು ವಾಸಿಸುತ್ತಿದ್ದವು.ಆರು ಮನೆಗಳಲ್ಲದೆ, ಪಕ್ಕದ ಜಮೀನುಗಳಲ್ಲಿ ಐದರಿಂದ ಆರು ಮನೆಗಳ ಇದ್ದವು.

8. ಪಿಡಬ್ಲ್ಯು .1, 2 ಮತ್ತು 3 ರವರ ಪ್ರತ್ಯಕ್ಷ ಸಾಕ್ಷ್ಯವನ್ನು ಪರಿಶೀಲಿಸಿದ ನಂತರ, ಅಪೀಲುದಾರರು ಮತ್ತು ದುಂಡಪ್ಪನ ನಡುವೆ ಎಲ್ಲೆಗೆ ಸಂಬಂಧಿಸಿದಂತೆ ವಿವಾದವಿತ್ತು ಎಂಬುದನ್ನು ನಿರಾಕರಿಸಿರುವುದು ಕಂಡುಬಂತು.ಅದಕ್ಕೆ ತದ್ವಿರುದ್ದವಾಗಿ, ಮುಖ್ಯ ವಿಚಾರಣೆಯಲ್ಲಿ 1 ನೇ ಅಪೀಲುದಾರನು ಪರಸ್ಪರ ಹೊಂದಿಕೊಂಡಿರುವ ಎರಡು ಜಮೀನುಗಳ ಎಲ್ಲೆಯಲ್ಲಿದ್ದ ಬನ್ನಿಮರವನ್ನು ಕಡಿದುಹಾಕಿದ್ದರಿಂದ ದುಂಡಪ್ಪ ಮತ್ತು ಮೃತ ಕಮಲಾಬಾಯಿ ಈ ಬಗ್ಗೆ ದೂರು ನೀಡಿದ್ದರು.ಇದರಿಂದಾಗಿ ನೆರೆಯವರ ಒಪ್ಪಿಗೆ ಪಡೆಯದೆ ಆ ಮರವನ್ನು ಅವನು ಏಕೆ ಕಡಿದುಹಾಕಿದ ಎಂಬುದರ ವಿವರಣೆ ನೀಡಲು 1 ನೇ ಅಪೀಲುದಾರನನ್ನು ಕರೆಸಿ, ಅನೌಪಚಾರಿಕ ಪಂಚಾಯಿತಿ ನಡೆಸಿದ್ದರು ಎಂಬ ವಿಷಯ ತಿಳಿದುಬಂತು.ಪ್ರಾಸಿಕ್ಯೂಷನ್ ಪ್ರಕಾರ, ಇದು 1 ನೇ ಅಪೀಲುದಾರನನ್ನು ಸಿಟ್ಟಿಗೇಳಿಸಿತು ಮತ್ತು ಅದು ಅಪರಾಧ ಎಸಗಲು ಪ್ರೇರಣೆಯಾಯಿತು.

9. ಇಬ್ಬರು ಪ್ರತ್ಯಕ್ಷದರ್ಶಿಗಳ ಸಾಕ್ಷ್ಯಾಧಾರಗಳು ಸುಳ್ಳಿನಿಂದ ಕೂಡಿದ್ದು, ತೀರಾ ಅಸ್ವಾಭಾವಿಕವಾಗಿದ್ದವು.ಆದ್ದರಿಂದ, ಈ ಅಧಿವಿಚಾರಣಾ ನ್ಯಾಯಾಲಯವು ಪ್ರತ್ಯಕ್ಷ ಸಾಕ್ಷಿಗಳ ಸಾಕ್ಷ್ಯ-ಪುರಾವೆಗಳನ್ನು ನಂಬುವಲ್ಲಿ ತಪ್ಪು ಮಾಡಿದೆ ಎಂದು ಅಪೀಲುದಾರರ ಪರ ಮಾನ್ಯ ವಕೀಲರು ಗಟ್ಟಿಯಾಗಿ ವಾದಿಸಿದ್ದಾರೆ. ಇನ್ನೊಂದು ಕಡೆಯಲ್ಲಿ, ಕಮಲಾಬಾಯಿ ಮತ್ತು ಧಾರೆಪ್ಪ ಕುಂಬಾರ್ ಎಂಬುವವರಿಗೆ 0 ಅಕ್ರಮ ಸಂಬಂಧವಿತ್ತೆಂದು ಮತ್ತು ಆ ಬಗ್ಗೆ ದುಂಡಪ್ಪ ಮತ್ತು ಕಮಲಾಬಾಯಿ ಮಧ್ಯೆ ಆಗಾಗ ಜಗಳವಾಗುತ್ತಿತ್ತೆಂದು ಪಿಡಬ್ಲ್ಯು .12 ಮತ್ತು 13 ರವರಿಗೆ ಕೇಳಿದ ಸೂಚನೆಗಳನ್ನು ಮಾನ್ಯ ವಕೀಲರು ಈ ನ್ಯಾಯಾಲಯದ ಗಮನಕ್ಕೆ ತಂದರು.ವಾಸ್ತವವಾಗಿ, ದುಂಡಪ್ಪ ಈ ಕೊಲೆಯನ್ನು ಮಾಡಿದ್ದು, ಅದನ್ನು ಸಾಕ್ಷಿದಾರರು ನಿರಾಕರಿಸಿದ್ದಾರೆ ಎಂದು ಸೂಚಿಸಲಾಯಿತು.

10. ಇದಕ್ಕೆ ವಿರೋಧವಾಗಿ, ಆ ಘೋರ ಘಟನೆಯನ್ನು ನೋಡಿದ ಮೇಲೆ ಮತ್ತು 2 ನೇ ಅಪೀಲುದಾರನು ಕೊಡಲಿಯನ್ನು ಝುಳಪಿಸುತ್ತಿದ್ದುದನ್ನು ಕಂಡು ಹೆದರಿ, ತಮ್ಮ ಪ್ರಾಣ ಉಳಿಸಿಕೊಳ್ಳಲು ಓಡಿಹೋದ ಮತ್ತು ಯಾವುದೋ ಜಮೀನಿನಲ್ಲಿ ಬಚ್ಚಿಟ್ಟುಕೊಂಡ ಆ ಇಬ್ಬರು ಹುಡುಗರ ಪ್ರತಿಕ್ರಿಯೆಯು ಅಸಹಜ ವರ್ತನೆಯೆಂದು ಅಥವಾ ನಂಬಲಸಾಧ್ಯವಾದದ್ದೆಂದು ಭಾವಿಸಲಾಗದು ಎಂದು ಮಾನ್ಯ ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ನಿವೇದಿಸಿದ್ದಾರೆ.ನರಹತ್ಯೆಯ ಭಯಂಕರ ಕೃತ್ಯವನ್ನು ನೋಡಿದಾಗ ಒಂದು ನಿರ್ದಿಷ್ಟವಾದ ಪ್ರತಿಕ್ರಿಯೆಯನ್ನು ಯಾರೊಬ್ಬರೂ ನಿರೀಕ್ಷಿಸತಕ್ಕದ್ದಲ್ಲ ಎಂಬುದು ಈಗ ಸುಸ್ಥಾಪಿತವಾಗಿದೆ.ಪ್ರತಿಕ್ರಿಯೆಗಳು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಾಗಬಹುದು ಮತ್ತು ಸುತ್ತಮುತ್ತಲಿನ ಪ್ರದೇಶ ಹಾಗೂ ಸನ್ನಿವೇಶಗಳಿಗೆ ಒಳಪಟ್ಟಂತೆ, ಪ್ರತಿಕ್ರಿಯೆಯು ಭಿನ್ನವಾಗಿರಬಹುದು ಎಂದು ಮಾನ್ಯ ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್

ನಿವೇದಿಸಿದ್ದಾರೆ.ಈ ಸಂಬಂಧ, ಮಾನ್ಯ ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ಈ ಕೆಳಗಿನ ನಿರ್ಣಯಗಳನ್ನು ಅವಲಂಬಿಸಿದ್ದಾರೆ.

1. ಉತ್ತರ ಪ್ರದೇಶ ರಾಜ್ಯ -ವಿರುದ್ಧ-ದೇವೇಂದ್ರ ಸಿಂಗ್ ಎಐಆರ್ 2004 ಎಸ್ಸಿ 3690

2. 06.06.2016 ರಂದು ನಿರ್ಣಯಿಸಲಾದ, ಶರಣಪ್ಪ ವಿರುದ್ಧ ಕರ್ನಾಟಕ ರಾಜ್ಯ ಮೊಕದ್ದಮೆಯಲ್ಲಿನ ಕ್ರಿಮಿನಲ್ ಅಪೀಲು ಸಂಖ್ಯೆ:3593/2010 ಮತ್ತು ಸಂಬಂಧಿತ ಅಪೀಲಿನಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ವರದಿಯಾಗಿಲ್ಲದ ನಿರ್ಣಯ.

11. ಸಹಜ ಪ್ರತಿಕ್ರಿಯೆಗೆ ಸಂಬಂಧಿಸಿದಂತೆ ಯಾವುದೇ ಸ್ಥಾಪಿತ ನಿಯಮವಿಲ್ಲ ಎಂದು ಈ ಎರಡು ತೀರ್ಮಾನಗಳಿಂದ ಸೂಚಿಸಲಾಗಿದೆ.ಅವನು ನಿರ್ದಿಷ್ಟ ರೀತಿಯಲ್ಲಿ ಪ್ರತಿಕ್ರಿಯಿಸಿಲ್ಲ ಎಂಬ ಕಾರಣದ ಮೇಲೆ, ಸಾಕ್ಷಿದಾರನ ಸಾಕ್ಷ್ಯವನ್ನು ಬಿಟ್ಟುಬಿಡುವುದು ಸಂಪೂರ್ಣ ನಿಜವಲ್ಲದ ಮತ್ತು ಊಹಿಸಿಕೊಳ್ಳಲಾಗದ ರೀತಿಯಲ್ಲಿ ಸಾಕ್ಷದ ಗುಣಾವಗುಣಗಳನ್ನು ವಿವೇಚಿಸುವುದಾಗಿದೆ.ಕೊಲೆ ಮಾಡುವುದು ಸಾಮಾನ್ಯ ಘಟನೆಯೇನಲ್ಲ.ಅಂತಹ ದೃಶ್ಯವನ್ನು ನೋಡಿದಾಗ ಸಾಮಾನ್ಯ ವ್ಯಕ್ತಿಯಲ್ಲಿ ಅದು ಮನಸ್ಸಿಗೆ ಆಘಾತವನ್ನು ಉಂಟುಮಾಡುತ್ತದೆ ಮತ್ತು ಭಯವನ್ನುಂಟುಮಾಡುತ್ತದೆ.ಸಾಪೇಕ್ಷವಾಗಿ, ಯುವಕರು ಮಾರಣಾಂತಿಕ ಆಯುಧವನ್ನು ಹಿಡಿದಿದ್ದಾಗ ಮತ್ತು ಹೇಳಲಾದ ಸಾಕ್ಷಿದಾರರು ಕ್ರೂರವಾಗಿ ಕೊಲೆ ಮಾಡುವುದನ್ನು ನೋಡಿದ್ದಾಗ, ಅವರು ತಕ್ಷಣವೇ ಪೊಲೀಸ್ ಠಾಣೆಗೆ ಧಾವಿಸುವ ಅಥವಾ ಇತರರಿಗೆ ತಿಳಿಸಲು ಹಳ್ಳಿಗೆ ಧಾವಿಸುವ ಮತ್ತು ಒಂದು ನಿಯಮವು ನಿರ್ದೇಶಿಸುವಂತಹ ರೀತಿಯಲ್ಲಿ ಪ್ರಜ್ಞಾಪೂರ್ವಕವಾಗಿ ವರ್ತಿಸುತ್ತಾನೆಂದು ನಿರೀಕ್ಷಿಸಲಾಗುವುದೆಂದು ಹೇಳಲಾಗುವುದಿಲ್ಲ.

12. ಅಷ್ಟೇ ಅಲ್ಲದೆ, ಅಪರಾಧವನ್ನು ಮಾಡಲು 2 ನೇ ಅಪೀಲುದಾರನು ಬಳಸಿದ ಮಚ್ಚನ್ನು, 2 ನೇ ಅಪೀಲುದಾರನ ಸೂಚನೆಯಂತೆ ಮನೆಯೊಂದರಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಮಾನ್ಯ ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ನಿವೇದಿಸಿದ್ದಾರೆ.ಮಚ್ಚಿನ ಮೇಲೆ ಕಂಡುಬಂದ ರಕ್ತದ ಕಲೆಯು ಮೃತಳ ರಕ್ತಕ್ಕೆ ಹೊಂದಾಣಿಕೆಯಾಗುತ್ತಿದ್ದು, ಅವೆರಡೂ ' ಎ ' ಗುಂಪಿನ ರಕ್ತವೆಂದು ಕಂಡುಬಂದಿತ್ತು.ಆದುದರಿಂದ, ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ಸಮಗ್ರವಾಗಿ ಪರಿಶೀಲಿಸಿ ಮತ್ತು ಸಾಕ್ಷ್ಯಗಳ ಗುಣಾವಗುಣಗಳನ್ನು ವಿವೇಚಿಸಿ, ಈ ಆರೋಪಿತ ಅಪರಾಧವನ್ನು ಇದರಲ್ಲಿನ ಅಪೀಲುದಾರರೇ ಮಾಡಿದ್ದಾರೆ ಎಂಬುದರಲ್ಲಿ ಯಾವುದೇ ರೀತಿಯ ಸಂಶಯ ಇರುವುದಿಲ್ಲ ಎಂದು ಸರಿಯಾಗಿಯೇ ತೀರ್ಮಾನಕ್ಕೆ ಬಂದಿದೆ ಎಂದು ಅವರು ನಿವೇದಿಸಿದ್ದಾರೆ.

13. ಅಪೀಲುದಾರರ ಪರ ಮಾನ್ಯ ವಕೀಲರ ಮತ್ತು ಹೆಚ್ಚುವರಿ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ವಾದಗಳನ್ನು ಆಲಿಸಲಾಗಿದೆ ಮತ್ತು ಪ್ರಶ್ನಿತ ತೀರ್ಪನ್ನು ಹಾಗೂ ಮೂಲ ದಾಖಲೆಗಳನ್ನು ಪರಿಶೀಲಿಸಲಾಗಿದೆ.

14. ದಾಖಲೆಯಲ್ಲಿನ ಸಾಕ್ಷ್ಯಗಳ ವಿವರವಾದ ವಿಶ್ಲೇಷಣೆಯಿಂದ, ಹಲವಾರು ಅಸ್ಪಷ್ಟ ಉದ್ದೇಶಗಳು ಕಂಡುಬಂದಿವೆ.ಪಿಡಬ್ಲ್ಯು 12, 13 ಮತ್ತು 14 ರ ಎಂದರೆ, ಮೃತಳ ಇಬ್ಬರು ಗಂಡುಮಕ್ಕಳ ಮತ್ತು ಅವಳ ಗಂಡನ ಸಾಕ್ಷ್ಯಗಳ ಪ್ರಕಾರ, ಕಮಲಾಬಾಯಿ ತನ್ನ ಗಂಡನಿಗಾಗಿ ಊಟವನ್ನು ತೆಗೆದುಕೊಂಡು ಬೆಳಿಗ್ಗೆ ಸುಮಾರು 9.00 ಗಂಟೆಗೆ ಮನೆಯಿಂದ ಹೊರಟಳು.ಪಿಡಬ್ಲ್ಯು 3 ರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ತನ್ನ ಗಂಡನಿಗೆ ಊಟದ ಬುತ್ತಿ ಕೊಟ್ಟಳು.ಅವಳು, ತಾವು ಜಾತ್ರೆಗೆ ಹೋಗುವ ಸಲುವಾಗಿ ಮನೆಗೆ ಬೇಗ ಹಿಂದಿರುಗುವಂತೆ ತನ್ನ ಗಂಡನಿಗೆ ತಿಳಿಸಿದಳು.ಪಿಡಬ್ಲ್ಯು .12 ಮತ್ತು 13 ತಮ್ಮ ತಾಯಿಯು ಗಂಡನಿಗೆ ಊಟವನ್ನು ಕೊಡಲು ಮನೆಯಿಂದ ಹೊರಡುವುದಕ್ಕೆ ಮೊದಲು ತಿಂಡಿ ಅಥವಾ ಏನನ್ನೂ ತಿಂದಿರಲಿಲ್ಲ ಎಂದು ನಿರ್ದಿಷ್ಟವಾಗಿ ಹೇಳಿದ್ದಾರೆ.ಶವ ಪರೀಕ್ಷೆಯ ವರದಿಯಲ್ಲಿ, ಮೃತಳ ಹೊಟ್ಟೆಯಲ್ಲಿ ಅರ್ಧಂಬರ್ಧ ಜೀರ್ಣವಾದ ಆಹಾರವಿದೆಯೆಂದು ಕಂಡುಬಂದಿದೆ.ಘಟನೆಯು ಬೆಳಿಗ್ಗೆ 9.30 ಯಿಂದ 10.00 ಗಂಟೆಯೊಳಗೆ ಸಂಭವಿಸಿದೆ ෆ ಎಂದು ಹೇಳಲಾಗಿದೆ.ಸಾಮಾನ್ಯವಾಗಿ, ಆಹಾರವು ಹೊಟ್ಟೆಯಲ್ಲಿ ಕೆಲವು ಗಂಟೆಗಳೊಳಗೆ ಜೀರ್ಣವಾಗುತ್ತದೆ.ಹಿಂದಿನ ರಾತ್ರಿ ಮೃತಳು ಸೇವಿಸಿದ ಆಹಾರವು ಮರುದಿನ ಬೆಳಿಗ್ಗೆ 10.00 ಗಂಟೆಯವರೆಗೂ ಹೊಟ್ಟೆಯಲ್ಲಿ ಅರ್ಧಂಬರ್ಧ ಜೀರ್ಣವಾದ ರೂಪದಲ್ಲಿ ಇನ್ನೂ ಉಳಿದಿರಲು ಸಾಧ್ಯವಿರುವುದಿಲ್ಲ.ಈ ಘಟನೆಯು ಬೆಳಿಗ್ಗೆ 10.00 ಗಂಟೆಗೆ ನಡೆದಿದೆಯೇ?ಅಥವಾ ತರುವಾಯ, ಮೃತಳು ಯಾವುದೋ ಆಹಾರವನ್ನು ತಿಂದ ನಂತರ ನಡೆದಿದೆಯೇ?ಎಂಬ ಬಗ್ಗೆ ಈ ನ್ಯಾಯಾಲಯಕ್ಕೆ ಸಂಶಯವನ್ನುಂಟುಮಾಡಲು ಅಪೀಲುದಾರರ ಪರ ಮಾನ್ಯ ವಕೀಲರು ಸಾಕ್ಷ್ಯದ ಈ

ಭಾಗವನ್ನು ಎತ್ತಿ ತೋರಿಸಿದ್ದಾರೆ.ಅಷ್ಟೇ ಅಲ್ಲದೆ, ಮೃತಳ ಮತ್ತು ಧಾರೆಪ್ಪ ಕುಂಬಾರ್ ನಡುವೆ ಅನೈತಿಕ ಸಂಬಂಧವಿತ್ತು ಎಂದು ಮಾನ್ಯ ವಕೀಲರು, ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ಎತ್ತಿ ತೋರಿಸುವ ಮೂಲಕ ಈ ಅಂಶಕ್ಕೆ ಒತ್ತು ನೀಡಲು ಪ್ರಯತ್ನಿಸಿದ್ದಾರೆ.ಮೃತಳು ತನ್ನ ಗಂಡನಿಗೆ ಆಹಾರವನ್ನು 0 ಕೊಟ್ಟ ನಂತರ, ಮನೆಗೆ ಹಿಂದಿರುಗಿ, ಆಹಾರ ಸೇವಿಸಿದ್ದಳು.ಆ ನಂತರ, ಆಕೆಯ ಗಂಡ ಕೆಲಸದಿಂದ ಹಿಂದಿರುಗುತ್ತಿದ್ದಾಗ, ಮೃತಳು ಸದರಿ ಧಾರೆಪ್ಪ ಕುಂಬಾರ್ನ ಜೊತೆಯಲ್ಲಿದ್ದುದನ್ನು ನೋಡಿರುತ್ತಾನೆ ಅಥವಾ ಮೃತಳ ಮತ್ತು ಅವಳ ಗಂಡನ ನಡುವೆ ವಾಗ್ವಾದ ನಡೆದಿರಬಹುದು ಮತ್ತು ಅವಳ ಗಂಡ ಅವಳನ್ನು ಕೊಂದಿರುವ ಸಾಧ್ಯತೆಯಿದೆ ಎಂದು ಮಾನ್ಯ ವಕೀಲರು ನಿವೇದಿಸಿದ್ದಾರೆ.ಮಾನ್ಯ ವಕೀಲರ ಪ್ರಕಾರ ಇದನ್ನು ತಳ್ಳಿಹಾಕಲಾಗದು.ಸಂಜೆ ಸುಮಾರು 5.30 ಗಂಟೆಗೆ ಮೃತದೇಹ ಕಂಡು ಜೋರಾಗಿ ಕೂಗಿಕೊಂಡೆ, ನೆರೆಹೊರೆಯ ಕೆಲವರು ಸ್ಥಳಕ್ಕೆ ಬಂದರು ಎಂದು ದುಂಡಪ್ಪ ತನ್ನ ಸಾಕ್ಷ್ಯದಲ್ಲಿ ಹೇಳಿದ್ದಾನೆಂಬ ಸಂಗತಿಯನ್ನು ಪರಿಗಣನೆಗೆ ತೆಗೆದುಕೊಂಡರೂ, ದುಂಡಪ್ಪ ದೂರನ್ನು ದಾಖಲಿಸಲು ಇಚ್ಛಿಸಲಿಲ್ಲ.ಪೊಲೀಸರಿಗೆ ಮಾಹಿತಿ ನೀಡುವಂತೆ ಸ್ಥಳದಲ್ಲಿದ್ದ ನೆರೆಹೊರೆಯವರನ್ನೂ ಕೇಳಿಕೊಳ್ಳಲಿಲ್ಲ.ಅವನು ತನ್ನ ಮಾವನಿಗೂ (ಪಿಡಬ್ಲ್ಯು .11) ವಿಷಯ ತಿಳಿಸಲಿಲ್ಲ.ಅವನು ಮರುದಿನ ಬೆಳಿಗ್ಗೆಯವರೆಗೆ ಕಾಣೆಯಾಗಿದ್ದ ತನ್ನ ಪುತ್ರರ ಬಗ್ಗೆಯೂ ವಿಚಾರಿಸಲಿಲ್ಲ.ಮತ್ತೊಂದೆಡೆ, ಅವನ ಮಕ್ಕಳು 24 ಗಂಟೆಗಳಿಗಿಂತ ಹೆಚ್ಚು ಕಾಲ ತಾವು ಯಾರದೋ ಜಮೀನಿನಲ್ಲಿ ಚ ಅಡಗಿಕೊಂಡಿದ್ದೆವೆಂದು ಹೇಳಿದ್ದಾರೆ.ಅವರು 24 ಗಂಟೆಗಳ ಕಾಲ ಅನ್ನ ನೀರಿಲ್ಲದೆ ಏನು ಮಾಡಿದರು?ಅಥವಾ ಹೇಗೆ ಬದುಕುಳಿದರು?ಎಂಬ ಬಗ್ಗೆ ಯಾವುದೇ ವಿವರಣೆಯಿಲ್ಲ.

15. ಅಪೀಲುದಾರರ ಪರ ಮಾನ್ಯ ವಕೀಲರು ಮಂಡಿಸಿದ ಅಪೂರ್ಣ ವಿವರಗಳು ಮತ್ತು ಅನುಮಾನವನ್ನು ಹಾಗೆಲ್ಲಾ ಹಗುರವಾಗಿ ತಳ್ಳಿಹಾಕಲಾಗುವುದಿಲ್ಲ.ಕೊಲೆಯಂತಹ ಘೋರ ಘಟನೆಗೆ ಸಾಕ್ಷಿಯಾದ ವ್ಯಕ್ತಿಯಿಂದ, ಅದಕ್ಕಿಂತ ಹೆಚ್ಚಾಗಿ, ಒಂದು ಮಗು ಇಂತಹ ಘೋರ ಘಟನೆಗೆ ಸಾಕ್ಷಿಯಾದಾಗ, ನಿರ್ದಿಷ್ಟ ಪ್ರತಿಕ್ರಿಯೆಯನ್ನು ನಿರೀಕ್ಷಿಸಲು ಸ್ಟ್ರೈಟ್ ಜಾಕೆಟ್ ಫಾರ್ಮುಲಾ ಇರಬಾರದು ಎಂಬ ಕಾನೂನಿನ ಸ್ಥಾಪಿತ ನಿಲುವನ್ನು ನಾವು ಮರೆತುಬಿಡುವುದಿಲ್ಲ.ತಮ್ಮ ತಾಯಿಯನ್ನು ಒಬ್ಬ ವ್ಯಕ್ತಿಯು ವಧೆ ಮಾಡಿದ ಘಟನೆಯನ್ನು ತಾವು ನೋಡಿ, ಅಲ್ಲಿಂದ ಓಡಿಹೋಗಿ 24 ಗಂಟೆಗಳಿಗಿಂತ ಹೆಚ್ಚು ಕಾಲ ಯಾವುದೋ ಜಾಗದಲ್ಲಿ ಅವಿತಿದ್ದೆವು ಎಂಬುದು ಚ ಸುಮಾರು 14 ಮತ್ತು 15 ವರ್ಷ ವಯಸ್ಸಿನ ಪಿಡಬ್ಲ್ಯು .12 ಮತ್ತು 13 ರ ಹೇಳಿಕೆಯಾಗಿದೆ.ತಾಯಿಯ ಹತ್ಯೆಗೆ ಸಾಕ್ಷಿಯಾದ ಇಬ್ಬರು ಹುಡುಗರು ಚಿಕ್ಕವರೆಂಬುದನ್ನೂ ನಾವು ಮರೆಯಬಾರದು.ಇನ್ನೊಬ್ಬ ಯುವಕನು ಕೊಲ್ಲುವನೆಂಬ ಭಯದಿಂದ ಆರಂಭದಲ್ಲಿ ಅವರಿಗೆ ಮಾರಣಾಂತಿಕ ಬೆದರಿಕೆಯಿದೆ ಎಂದು ಕಲ್ಪಿಸಿಕೊಂಡೂ ಸಹ ಅವರು ಸ್ಥಳದಿಂದ ಓಡಿಹೋಗಿರಬಹುದು.ಆ ಭಯಂಕರ ಕೃತ್ಯವನ್ನು ಎಸಗಿದನೆಂದು ಹೇಳಲಾದ 2 ನೇ ಅಪೀಲುದಾರನೂ ಸಹ 18 ರಿಂದ 19 ವರ್ಷ ವಯಸ್ಸಿನವನಾಗಿದ್ದನು.ಅಪೀಲುದಾರರು ಕ್ರಿಮಿನಲ್ ಹಿನ್ನೆಲೆ ಹೊಂದಿರುವರೆಂದು ಅಥವಾ ಅವರನ್ನು ಅಪಾಯಕಾರಿ ದುಷ್ಕರ್ಮಿಗಳನ್ನಾಗಿ ನೋಡಲಾಗಿದೆಯೆಂದು ತೋರಿಸಲು ದಾಖಲೆಯಲ್ಲಿ ಏನೂ ಇಲ್ಲ. ಆದ್ದರಿಂದ, ಪ್ರಾರಂಭದಲ್ಲಿ ಇಬ್ಬರು ಹುಡುಗರೂ ಭಯಭೀತರಾಗಿ ಅಲ್ಲಿಂದ ಓಡಿಹೋಗಿ, ಒಂದು ಪ್ರತ್ಯೇಕವಾದ ಸ್ಥಳದಲ್ಲಿ ಅಡಗಿಕೊಂಡರು ಎಂದು ಭಾವಿಸುವುದರಿಂದ, ಅವರು ಅನ್ನ ನೀರಿಲ್ಲದೆ, 24 ಗಂಟೆಗಳಿಗಿಂತ ಹೆಚ್ಚು ಕಾಲ ಪ್ರತ್ಯೇಕವಾದ ಚ ಸ್ಥಳದಲ್ಲಿ ಅಡಗಿಕೊಂಡಿದ್ದರೆಂದು ಒಪ್ಪಿಕೊಳ್ಳಲಾಗುವುದಿಲ್ಲ ಮತ್ತೊಂದೆಡೆ, ಈ ಘಟನೆಯ ಬಗ್ಗೆ ಕನಿಷ್ಟ ತಮ್ಮ ತಂದೆಗೆ ತಿಳಿಸಲು ಒಬ್ಬರು ಇನ್ನೊಬ್ಬರಲ್ಲಿ ಸ್ವಲ್ಪ ಧೈರ್ಯ ತುಂಬುತ್ತಿದ್ದರು.ತಂದೆ ಪಿಡಬ್ಲ್ಯು .14 ಈ ಇಬ್ಬರು ಹುಡುಗರ ಬಗ್ಗೆ ಏನೂ ಹೇಳಿಲ್ಲ ಎಂಬುದನ್ನು ಸಹ ಗಮನಿಸುವುದು ಸೂಕ್ತವಾಗಿದೆ.ಪಿಡಬ್ಲ್ಯು .14 ಸಾಯಂಕಾಲ 5.30 ರಲ್ಲಿ ತಾನು ಮೃತದೇಹವನ್ನು ನೋಡಿದಾಗಿನಿಂದ ಮರುದಿನ ಬೆಳಿಗ್ಗೆ ಪಿಡಬ್ಲ್ಯು .11 ದೂರು ಕೊಡಲು ಪೊಲೀಸ್ಠಾಣೆಗೆ ಹೋಗುವವರೆಗೂ ಏನೆಲ್ಲಾ ನಡೆಯಿತೆಂದು ವಿವರಿಸದೆ ಪಿಡಬ್ಲ್ಯು .14 ಮೌನವಾಗಿದ್ದಾನೆ.ಪಿಡಬ್ಲ್ಯು.ಸಾಯಂಕಾಲ 5.30 ರಲ್ಲಿ ನಿಜವಾಗಿಯೂ ಮೃತದೇಹವನ್ನು ನೋಡಿದ್ದರೆ, ಸಹಜವಾಗಿ ತನ್ನ ಮಕ್ಕಳ ಬಗ್ಗೆಯೂ ಸಹ ಅವನು ಯೋಚಿಸುತ್ತಿದ್ದ.ತನ್ನ ಮಕ್ಕಳಿಗೂ ಏನೋ ಆಗಬಾರದ್ದಾಗಿದೆ ಎಂದು ಸಹಜವಾಗಿಯೇ ಅವನ ಮನಸ್ಸು ಚಿಂತಿಸುತ್ತಿತ್ತು. ಅವನು ಮಕ್ಕಳು ಎಲ್ಲಿದ್ದಾರೆಂದು ಹುಡುಕಲೂ ಪ್ರಯತ್ನಿಸಲಿಲ್ಲ ಮತ್ತು ಮಕ್ಕಳೂ ಸಹ ಆ ಘೋರ ಕೃತ್ಯದ ಬಗ್ಗೆ ತಮ್ಮ ತಂದೆಗೆ ತಿಳಿಸುವ ಯೋಚನೆ ಮಾಡಲಿಲ್ಲ.

16. ಪ್ರಾಸಿಕ್ಯೂಷನ್ ವಾದವನ್ನು ಮತ್ತಷ್ಟು ಹದಗೆಡಿಸುವ ಸಂಗತಿಯೆಂದರೆ, ಪಿಡಬ್ಲ್ಯು .11, ದೂರುದಾರನು ದೂರವಾಣಿ ಮೂಲಕ ಮಾಹಿತಿಯನ್ನು ಪಡೆದ ನಂತರ, ರಾತ್ರಿ ಸುಮಾರು 9.00 ಗಂಟೆಯ ವೇಳೆಗೆ ಘಟನೆ ನಡೆದ ಸ್ಥಳಕ್ಕೆ ಬಂದಾಗ, ಆ ಸ್ಥಳದಲ್ಲಿ ಇತರ ನೆರೆಹೊರೆಯವರ ಜೊತೆಯಲ್ಲಿ ತನ್ನ ಅಳಿಯ ದುಂಡಪ್ಪ ಮತ್ತು ತನ್ನ

ಇಬ್ಬರು ಮೊಮ್ಮಕ್ಕಳಾದ ಮಂಜುನಾಥ್ ಮತ್ತು ವಿಠಲ್ನನ್ನು ನೋಡಿದುದಾಗಿ ಪಾಟೀಸವಾಲಿನ ಸಮಯದಲ್ಲಿ ಒಪ್ಪಿಕೊಂಡಿದ್ದಾನೆ.ವಿಚಾರಣಾ ನ್ಯಾಯಾಲಯವು, ಇಬ್ಬರು ಹುಡುಗರು ಮರುದಿನ ಬೆಳಿಗ್ಗೆ 7.00 ಗಂಟೆಗೆ ೧ ವಾಪಸ್ ಬಂದರು ಎಂದು ಇತರ ಸಾಕ್ಷಿಗಳು ಹೇಳಿಕೆ ನೀಡಿದ್ದಾರೆ ಎಂದು ಹೇಳಿ, ಪಿಡಬ್ಲ್ಯು.11 ರಿಂದ ವ್ಯಕ್ತವಾದ ಮುಖ್ಯ ಮಾಹಿತಿಯನ್ನು ಬದಿಗಿರಿಸಿದೆ ಎಂಬುದು ಆಶ್ಚಂ ರ್ಯಕರವಾಗಿದೆ.ಅಧಿವಿಚಾರಣಾ ನ್ಯಾಯಾಲಯವು ಈ ವಿಷಯದಲ್ಲಿ ಪ್ರತಿವಾದದಿಂದ ಪ್ರತ್ಯೇಕ ಸಾಕ್ಷ್ಯವನ್ನು ನಿರೀಕ್ಷಿಸುವಲ್ಲಿ ತಪ್ಪು ಮಾಡಿದೆ.ಪ್ರಾಸಿಕ್ಯೂಷನ್ ಮಂಡಿಸಿದ ಸಾಕ್ಷ್ಯಗಳಲ್ಲಿನ ವ್ಯತ್ಯಾಸಗಳ ಲಾಭ ಪಡೆಯಲು ಪ್ರತಿವಾದಕ್ಕೆ ಅನುಮತಿ ನೀಡಬೇಕು ಎಂಬುದು ಕಾನೂನಿನ ಸ್ಥಾಪಿತ ಸ್ಥಾನವಾಗಿದೆ.ಪಾಟಿ ಸವಾಲಿನ ಸಮಯದಲ್ಲಿ ಸಾಕ್ಷಿಯಿಂದ ಅದನ್ನು ಹೊರತೆಗೆಯುವ ಲಾಭವನ್ನು ಪಡೆಯಲು ಪ್ರತಿವಾದಕ್ಕೆ ಅನುಮತಿ ಇಲ್ಲದಿದ್ದರೆ, ಪಾಟೀಸವಾಲಿನ ಮೂಲತತ್ವವನ್ನೇ ತೆಗೆದುಹಾಕಿದಂತಾಗುತ್ತದೆ.ಪಿಡಬ್ಲ್ಯು .12 ಮತ್ತು 13 ರಾತ್ರಿ 9.00 ಗಂಟೆಗೆ ಸ್ಥಳದಲ್ಲಿದ್ದರು ಎಂಬ ಮಾಹಿತಿಯ ಈ ಮುಖ್ಯವಾದ ಅಂಶವು, ಪಿಡಬ್ಲ್ಯು..12 ಮತ್ತು 13 ಇವರು ಆ ಘಟನೆಯನ್ನು ತಾವು ನೋಡಿರುವುದಾಗಿ ಹೇಳಿದ್ದು, ತಾವು ಅಲ್ಲಿಂದ ಓಡಿಹೋಗಿ, ಘಟನೆ ನಡೆದ ಸ್ಥಳದಿಂದ ಸುಮಾರು 1 ಕಿ.ಮೀ.ದೂರದಲ್ಲಿದ್ದ ಯಾರೋ ವ್ಯಕ್ತಿಯ ಜಮೀನಿನಲ್ಲಿ ಅಡಗಿದ್ದುದಾಗಿ ಮತ್ತು ಮರುದಿನ ಬೆಳಿಗ್ಗೆ ಪಿಡಬ್ಲ್ಯು .11 ಪೊಲೀಸರ ಮುಂದೆ ದೂರನ್ನು ದಾಖಲಿಸಿದ ನಂತರವೇ ವಾಪಸ್ಸು ಬಂದಿರುವುದಾಗಿ ಕ್ಲೇಮು ಮಾಡಿದ್ದಾರೆ ಎಂಬ ಪ್ರಾಸಿಕ್ಯೂಷನ್ ವಾದವನ್ನು ಕೆಡವಿಹಾಕಿದೆ.

17. ಪಿಡಬ್ಲ್ಯು .12 ಮತ್ತು 13 ರಾತ್ರಿ 9.00 ಗಂಟೆಗೆ ಘಟನೆ ಸಂಭವಿಸಿದ ಸ್ಥಳದಲ್ಲಿದ್ದರು ಎಂಬುದನ್ನು ಪ್ರತಿವಾದಿ ವಕೀಲರು ಪಿಡಬ್ಲ್ಯು .11 ರಿಂದ ಬಹಿರಂಗಪಡಿಸಿದ ಕಾರಣದಿಂದ, ಪಿಡಬ್ಲ್ಯು .12 ಮತ್ತು 13 ಈ ಘಟನೆಗೆ ಪ್ರತ್ಯಕ್ಷಸಾಕ್ಷಿಗಳಾಗಿದ್ದಾರೆ ಎಂಬ ಮಾಹಿತಿಯ ಮುಖ್ಯವಾದ ಅಂಶವನ್ನು ದೂರಿನಲ್ಲಿ ಮತ್ತು ಎಫ್ಐಆರ್ ನಲ್ಲಿ ಬಹಿರಂಗಪಡಿಸದಿರುವುದು ಮತ್ತು ಮಚ್ಚಿನಿಂದ ಮೃತಳ ಮೇಲೆ ಹಲ್ಲೆ ಮಾಡಿದನೆಂದು ಹೇಳಲಾದ 2 ನೇ ಅಪೀಲುದಾರನ ಹೆಸರನ್ನು ಬಹಿರಂಗಪಡಿಸದಿರುವುದು ಪ್ರಾಸಿಕ್ಯೂಷನ್ ವಾದದಲ್ಲಿರುವ ಸುಳ್ಳನ್ನು ಬಹಿರಂಗಪಡಿಸಿದೆ ಮತ್ತು ಇದು ಪ್ರಾಸಿಕ್ಯೂಷನ್ ವಾದಕ್ಕೆ ಮಾರಕ ಎಂಬುದನ್ನು ಸುಸ್ಪಷ್ಟವಾಗಿ ತೋರಿಸಿದೆ.

18. ಈ ನಿಟ್ಟಿನಲ್ಲಿ, ರಾಮ್ಕುಮಾರ್ ಪಾಂಡೆ -ವಿರುದ್ಧ ಮಧ್ಯಪ್ರದೇಶ ರಾಜ್ಯ 1 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಸಾಕಷ್ಟು ಬೆಳಕು ಚೆಲ್ಲುತ್ತದೆ.ಸ್ವಲ್ಪ ಮಟ್ಟಿಗೆ ಇದೇ ರೀತಿಯ ಸಂದರ್ಭಗಳಲ್ಲಿ, ಮಗನ ಕೊಲೆಯಾಗಿದ್ದು ಮತ್ತು ತಂದೆ ದೂರುದಾರನಾಗಿದ್ದು, ಕೊಲೆಗೆ ಪ್ರತ್ಯಕ್ಷದರ್ಶಿಯೆಂದು ಹೇಳಲಾದ ಒಬ್ಬನೇ ವ್ಯಕ್ತಿಯ ಹೆಸರು ಜೋಗಿಂದರ್ ಸಿಂಗ್, ಮೃತನ ಗಾಯದ ಮೇಲೆ ಚಾದರ್ ಸುತ್ತಿರುವುದನ್ನು ನೋಡಿದ ವ್ಯಕ್ತಿಗಳು ಮಾತ್ರ ಇಬ್ಬರು ಹೆಣ್ಣು ಮಕ್ಕಳೆಂದು ಎಫ್ಐಆರ್ನಲ್ಲಿ ನಮೂದಿಸಲಾಗಿದೆ.ಮುಖ್ಯವಾಗಿ, ಅಪೀಲುದಾರನು ಮೃತನನ್ನು ಇರಿದಿದ್ದಾನೆಂದು ಎಫ್ಐಆರ್ನಲ್ಲಿ ಎಲ್ಲಿಯೂ ಉಲ್ಲೇಖಿಸಲಾಗಿಲ್ಲ ಎಂಬುದು ಗಮನಕ್ಕೆ ಬಂದಿದೆ.ಆದ್ದರಿಂದ, ಹರ್ಬಿಂದರ್ಸಿಂಗ್ನ ದೇಹದ ಮೇಲಿನ ಎರಡು ಇರಿತದ ಗಾಯಗಳಲ್ಲಿ ಒಂದನ್ನು ಅಪೀಲುದಾರನು ಉಂಟುಮಾಡಿದ್ದನೆಂದು ರಾತ್ರಿ ಅ 9.15 ರ ಹೊತ್ತಿಗೆ ಮೃತನ ತಂದೆಗೆ ಗೊತ್ತಿರುವುದಿಲ್ಲ ಎಂದು ಊಹಿಸಲಾಗದು ಎಂದು ಅಭಿಪ್ರಾಯಪಡಲಾಗಿದೆ.9 ನೇ ಕಂಡಿಕೆಯಲ್ಲಿ ಈ ಮುಂದಿನಂತೆ ತೀರ್ಮಾನಿಸಲಾಗಿದೆ:

"9. ನಿಸ್ಸಂದೇಹವಾಗಿ, ಎಫ್ಐಆರ್ ಹಿಂದಿನ ಹೇಳಿಕೆಯಾಗಿದ್ದು, ಕಟ್ಟುನಿಟ್ಟಾಗಿ ಹೇಳುವುದಾದರೆ, ಅದನ್ನು ಬರೆದವನನ್ನು

1. (1975) 3 ಎಸ್ಸಿಸಿ 815

ದೃಢೀಕರಿಸಲು ಅಥವಾ ವಿರೋಧಿಸಲು ಮಾತ್ರ ಬಳಸಬಹುದು.ಆದರೆ, ಈ ಸಂದರ್ಭದಲ್ಲಿ ಅದನ್ನು ಕೊಲೆಯಾದ ಹುಡುಗನ ತಂದೆ ದಾಖಲು ಮಾಡಿದ್ದು 1970 ನೇ ಇಸವಿಯ ಮಾರ್ಚ್ 23 ರಂದು ರಾತ್ರಿ 9.15 ರವರೆಗೆ ಅವನಿಗೆ ತಿಳಿದಿರುವಷ್ಟರಮಟ್ಟಿಗೆ ಈ ಘಟನೆಯ ಎಲ್ಲಾ ಪ್ರಮುಖ ಸಂಗತಿಗಳನ್ನು ತಿಳಿಸಿರಬೇಕಾಗಿತ್ತು.ಅವನ ಹೆಣ್ಣು ಮಕ್ಕಳು ಅಪೀಲುದಾರನು ಹರ್ಬಿಂದರ್ಸಿಂಗ್ನ ಮೇಲೆ ಹಲ್ಲೆ ಮಾಡಿದ್ದನ್ನು ನೋಡಿದ್ದರೆ, ಅದನ್ನು ಅವರ ತಂದೆಯು ಖಂಡಿತವಾಗಿಯೂ ಎಫ್ಐಆರ್ನಲ್ಲಿ ಉಲ್ಲೇಖಿಸಿರುತ್ತಿದ್ದನು.ಅಂತಹ ಪ್ರಮುಖ ಸಂಗತಿಗಳ ಲೋಪಗಳು, ಪ್ರಕರಣದ ಸಂಭವನೀಯತೆಗಳ ಮೇಲೆ ಪರಿಣಾಮಬೀರುತ್ತವೆ.ಪ್ರಾಸಿಕ್ಯೂಷನ್ ವಾದದ ಸತ್ಯಾಸತ್ಯತೆಯನ್ನು ನಿರ್ಣಯಿಸುವಲ್ಲಿ, ಅವು ಸಾಕ್ಷ್ಯ ಅಧಿನಿಯಮದ 11 ನೇ ಪ್ರಕರಣದ ಅಡಿಯಲ್ಲಿ ಸೂಕ್ತವಾಗಿವೆ ಎಂದು ನಾವು ಭಾವಿಸುತ್ತೇವೆ.

19. ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ, ಪ್ರಾಸಿಕ್ಯೂಷನ್ ಪ್ರಕಾರ, 1 ನೇ ಅಪೀಲುದಾರನನ್ನು 31.07.2010 ರಂದು ಸಂಜೆ 4.30 ಕ್ಕೆ ಬಂಧಿಸಲಾಗಿದ್ದರೆ, 2 ನೇ ಅಪೀಲುದಾರನನ್ನು ಅದೇ ದಿನ ರಾತ್ರಿ 8.30 ರ ಸುಮಾರಿಗೆ ಬಂಧಿಸಲಾಯಿತು.ಅಪೀಲುದಾರರು ಪರಾರಿಯಾಗಿದ್ದರು ಎಂಬುದು ಪ್ರಾಸಿಕ್ಯೂಷನ್ ವಾದವಲ್ಲ.

20. ದಾಖಲೆಯಲ್ಲಿನ ಸಾಕ್ಷ್ಯಗಳ ಪೂರ್ಣ ಓದು ಮತ್ತು ಮೇಲೆ ಮಾಡಿದ ಚರ್ಚೆಯು ಪ್ರಾಸಿಕ್ಯೂಷನ್ ವಾದದಲ್ಲಿ ಮತ್ತು ಪ್ರಶ್ನಿತ ತೀರ್ಪಿನಲ್ಲಿ ಗಂಭೀರ ಲೋಪಗಳನ್ನು ಎತ್ತುತ್ತದೆ.ಮೊದಲನೆಯದಾಗಿ, ಪ್ರತ್ಯಕ್ಷದರ್ಶಿಗಳೆಂದು ಹೇಳಲಾದ ಮತ್ತು ಮೃತಳ ಮಕ್ಕಳಾದ ಪಿ.ಡಬ್ಲ್ಯು .12 ಮತ್ತು 13 ರ ಸಾಕ್ಷ್ಯವು ಸತ್ಯಕ್ಕೆ ದೂರವಾದುದು ಹಾಗೂ ನಂಬಲಿಕ್ಕೆ ಬಹು ಕಷ್ಟವಾದುದಾಗಿದೆ.ಅವರು ಅನ್ನ ನೀರಿಲ್ಲದೆ, ಸುಮಾರು 24 ಗಂಟೆಗಳ ಕಾಲ ನೆರೆಯವರ ಜಮೀನಿನಲ್ಲಿ ಅಡಗಿದ್ದರೆಂಬ ಅವರ ಹೇಳಿಕೆಯನ್ನು ಅಷ್ಟು ಸುಲಭವಾಗಿ ನಂಬಲಾಗುವುದಿಲ್ಲ.ರಾತ್ರಿ 9.00 ಗಂಟೆಗೆ ಘಟನೆ ನಡೆದ ಸ್ಥಳದಲ್ಲಿ ಆ ಇಬ್ಬರು ಹುಡುಗರು ಇದ್ದರು ಎಂದು ಪಿ.ಡಬ್ಲ್ಯು .11 ಬಹಿರಂಗಪಡಿಸಿದ ಮಾಹಿತಿಯು ಇಬ್ಬರು ಪ್ರತ್ಯಕ್ಷದರ್ಶಿಗಳ ಸಾಕ್ಷ್ಯವನ್ನು ನಂಬದಂತೆ ಮಾಡುತ್ತದೆ.ಎರಡನೆಯದಾಗಿ, ಸಂಜೆ 5.30 ಕ್ಕೆ ತನ್ನ ಹೆಂಡತಿಯ ಮೃತದೇಹವನ್ನು ನೋಡಿದ್ದಾಗಿ ಪೊಲೀಸರಿಗೆ ಮಾಹಿತಿ ನೀಡದ ಕಾರಣ ಮೃತಳ ಗಂಡ ಪಿ.ಡಬ್ಲ್ಯು .14 ರ ವರ್ತನೆಯು ಪ್ರಾಸಿಕ್ಯೂಷನ್ ಮೊಕದ್ದಮೆಯಲ್ಲಿ ಗಂಭೀರ ಅನುಮಾನವನ್ನು ಹುಟ್ಟುಹಾಕುತ್ತದೆ.ನೆರೆಯ ಭೂಮಿಯಲ್ಲಿ ನಿರ್ಮಾಣ ಕಾರ್ಯಗಳನ್ನು ಮಾಡುತ್ತಿದ್ದ ನೆರೆಹೊರೆಯವರಲ್ಲಿ ಒಬ್ಬನಾದ ಪಿ.ಡಬ್ಲ್ಯು .1 ರ ಸಾಕ್ಷ್ಯದಿಂದಲೇ ಪ್ರಾಸಿಕ್ಯೂಷನ್ ವಾದಕ್ಕೆ ಗಂಭೀರ ಹೊಡೆತ ಬಿದ್ದಿದೆ.ಆ ದುರದೃಷ್ಟದ ದಿನ ಸಂಜೆ ಸುಮಾರು 6.00 ಗಂಟೆಗೆ ತಾನು ತನ್ನ ಕೆಲಸದ ಸ್ಥಳದಿಂದ ಹೊರಟಿದ್ದಾಗ, ತನಗೆ ದುಂಡಪ್ಪನ (ಪಿ.ಡಬ್ಲ್ಯು .14) ಅಳಲು ಕೇಳಿಸಿತು.ತಾನು ಇತರ ಕೆಲವರೊಂದಿಗೆ ಆ ಸ್ಥಳಕ್ಕೆ ಧಾವಿಸಿದಾಗ ಅಲ್ಲಿ ಕಮಲಾಬಾಯಿಯ ಮೃತದೇಹವನ್ನು ನೋಡಿದುದಾಗಿ ಪಿ.ಡಬ್ಲ್ಯು.ತನ್ನ ಸಾಕ್ಷ್ಯದಲ್ಲಿ ಹೇಳಿದ್ದಾನೆ.ಸಂಜೆ ಸುಮಾರು 7.00 ಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದರು ಎಂದು ಅವನು ನಿರ್ದಿಷ್ಟವಾಗಿ ಹೇಳಿದ್ದಾನೆ.ಪೊಲೀಸರು ಪಿ.ಡಬ್ಲ್ಯು .1 ರ ಹೆಸರು ಸೇರಿದಂತೆ ಅಲ್ಲಿ ಜಮಾಯಿಸಿದ್ದ ವ್ಯಕ್ತಿಗಳ ಹೆಸರನ್ನು ನೋಟ್ ಮಾಡಿಕೊಂಡರು.

21. ತನಿಖೆಯನ್ನು ನಡೆಸಿದ ರೀತಿಯು ಅಪೇಕ್ಷಿಸಬೇಕಾದ ಹೆಚ್ಚಿನದನ್ನು ಬಿಡುತ್ತದೆ.ಪಿ.ಡಬ್ಲ್ಯು .12 ಮತ್ತು 13 ಸುಮಾರು 24 ಗಂಟೆಗಳ ಕಾಲ ಒಂದು ಸ್ಥಳದಲ್ಲಿ ಅಡಗಿದ್ದರು ಎಂಬ ಸಂಗತಿಯನ್ನು ಪುಷ್ಟೀಕರಿಸುವ ಯಾವುದೇ ಸಾಕ್ಷ್ಯಾಧಾರಗಳನ್ನು ತನಿಖಾಧಿಕಾರಿಯು ಸಲ್ಲಿಸಿಲ್ಲ.ಪಿ.ಡಬ್ಲ್ಯು .12 ಮತ್ತು 13 ತಾವು ಅಡಗಿಕೊಂಡಿದ್ದರೆಂದು ಹೇಳಿದ ಜಮೀನು ಯಾರೇ ದಾರಿಹೋಕರ ಕಣ್ಣುಗಳಿಗೆ ಕಾಣದೆ ತಮ್ಮನ್ನು ತಾವು ಅಡಗಿಸಿಕೊಳ್ಳಬಹುದಾದ ಸ್ಥಳವಾಗಿತ್ತೇ?ಎಂಬ ಬಗ್ಗೆ ಯಾವುದೇ ಮಾಹಿತಿಯು ಲಭ್ಯವಿಲ್ಲ.ಸದರಿ ಜಮೀನಿನ ಮಾಲೀಕರನ್ನು ವಿಚಾರಣೆಗೆ ಒಳಪಡಿಸಿಲ್ಲ.ದಿನಾಂಕ: 31.7.2010 ರಂದು ಬೆಳಿಗ್ಗೆ 7.00 ಗಂಟೆಗೆ ಎಫ್ಐಆರ್ ದಾಖಲಾಗಿದ್ದು, ಅದನ್ನು ರಾತ್ರಿ 10.15 ಗಂಟೆಗೆ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.ಎಫ್ಐಆರ್ಅನ್ನು ಪೊಲೀಸ್ ಠಾಣೆಯಿಂದ ನ್ಯಾಯಾಲಯಕ್ಕೆ ಕೊಂಡೊಯ್ದ ಪೊಲೀಸ್ ಪೇದೆಯಿಂದ, ಪೊಲೀಸ್ ಠಾಣೆಯು ನ್ಯಾಯಾಲಯದಿಂದ 100 ಮೀಟರುಗಳ ಅಂತರದಲ್ಲಿದೆ ಎಂದು ತಿಳಿದುಬಂದಿದೆ.ದೂರನ್ನು ದಾಖಲಿಸುವಲ್ಲಿ ಮತ್ತು ಪೊಲೀಸರು ಎಫ್ಐಆರ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸುವಲ್ಲಿ ಆಗಿರುವ ಹೆಚ್ಚಿನ ವಿಳಂಬವು ಪ್ರಾಸಿಕ್ಯೂಷನ್ ವಾದವನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ.

22. ಕುನ ಅಲಿಯಾಸ್ ಸಂಜಯ ಬೆಹರಾ ವಿರುದ್ಧ ಒಡಿಶಾ ರಾಜ್ಯ ಮೊಕದ್ದಮೆಯಲ್ಲಿ ಒಬ್ಬನೇ ಪ್ರತ್ಯಕ್ಷದರ್ಶಿಯಿದ್ದು, ಅವನು ಆ ಘಟನೆ ಸಂಭವಿಸುತ್ತಿರುವಾಗ ಅದನ್ನು ತಡೆಯುವುದಕ್ಕಾಗಲೀ ಅಥವಾ ಸ್ಥಳೀಯ ನಿವಾಸಿಗಳ ಸಹಾಯವನ್ನು ಪಡೆಯುವುದಕ್ಕಾಗಲೀ ದನಿಯೆತ್ತಲಿಲ್ಲ ಅಥವಾ ಕೂಗಿಕೊಳ್ಳಲಿಲ್ಲ ಅಥವಾ ಜನ ಸೇರಿಸಲು ಎಚ್ಚರಿಕೆಯ ಗಂಟೆಯನ್ನು ಮೊಳಗಿಸಲಿಲ್ಲ ಎಂಬುದನ್ನು ಗಮನಿಸಲಾಗಿದೆ.ಅವನ ಸಂಬಂಧಿಕರ ಮನೆ ಮತ್ತು ಮೃತನ ಮನೆ ಬಹುತೇಕ ಒಂದೇ ಆವರಣದಲ್ಲಿದ್ದವು ಎಂಬ ಸಂಗತಿಯನ್ನು ಹೊರತುಪಡಿಸಿ, ಸುಮಾರು 150 ರಿಂದ 200 ನಿವಾಸಿಗಳು ಹತ್ತಿರದಲ್ಲಿ ವಾಸಿಸುತ್ತಿದ್ದಾರೆ ಎಂದು ಸಾಕ್ಷಿಯು ಒಪ್ಪಿಕೊಂಡಿದ್ದಾನೆಂಬುದನ್ನು ಗಮನಿಸಲಾಗಿದೆ.ಅಪೀಲುದಾರನು ತನಗೆ ಬೆದರಿಕೆ ಹಾಕಿದ್ದ ಕಾರಣ, ತಕ್ಷಣವೇ ಈ ಘಟನೆಯನ್ನು ತಾನು ಬಹಿರಂಗಪಡಿಸಲಿಲ್ಲ ಎಂಬ ಆತನ ವಾದವು, ಏನೇ ಆಗಲಿ, ಆ ಕೃತ್ಯವು ನಡೆಯುತ್ತಿದ್ದ ಸಮಯದಲ್ಲಿ ಅವನ ಹೇಳಲಾಗದ ಮೌನ ಅಥವಾ ಉದಾಸೀನತೆಯನ್ನು ಯಾವುದೇ ರೀತಿಯಲ್ಲಿಯೂ ವಿವರಿಸಿಲ್ಲ ಅಥವಾ ಸಮರ್ಥಿಸಿಲ್ಲ.ಆದ್ದರಿಂದ, ಒಟ್ಟಾರೆ ಸನ್ನಿವೇಶದಲ್ಲಿ, ಪಿ.ಡಬ್ಲ್ಯು .1 ರ ಸಾಕ್ಷ್ಯವು ಹೆಚ್ಚು ಅಸಂಭವನೀಯ, ಅಸಂಬದ್ಧ ಮತ್ತು ಅನುಮಾನಾಸ್ಪದವಾಗಿದೆ ಚ ಎಂಬ ಅದರಲ್ಲೂ ಹೆಚ್ಚು ನಿರ್ದಿಷ್ಟವಾಗಿ,

ನಿಶ್ಚಿತತೆಯ ಪ್ರಮಾಣದ ಅವಶ್ಯಕತೆಯ ಪರೀಕ್ಷೆಯ ದೃಷ್ಟಿಯಿಂದ, ಸಾಕ್ಷಿಯು ನಿರೂಪಿಸಿದ ಸಂಗತಿಗಳನ್ನು ಸಾಬೀತುಪಡಿಸಿದಂತಹ ಸಂಗತಿಗಳು ಎಂದು ಒಪ್ಪಿಕೊಳ್ಳುವ ಅಗತ್ಯತೆಯಿದೆ ಎಂಬ ಪ್ರತಿವಾದದ ವಾದವನ್ನು ಲಘುವಾಗಿ ಪಕ್ಕಕ್ಕೆ ತಳ್ಳಿಹಾಕಲಾಗುವುದಿಲ್ಲ ಎಂದು ಅಭಿಪ್ರಾಯಪಡಲಾಗಿದೆ.

23. ನಿಸ್ಸಂದೇಹವಾಗಿ, ಘೋರ ಕೊಲೆಗೆ ಸಾಕ್ಷಿಯಾದ ವ್ಯಕ್ತಿಯ ಪ್ರತಿಕ್ರಿಯೆಯು ವ್ಯಕ್ತಿಯಿಂದ ವ್ಯಕ್ತಿಗೆ, ಹಾಜರಾಗುವ ಸುತ್ತಮುತ್ತಲಿನ ಮತ್ತು ಸಂದರ್ಭಗಳನ್ನು ಅವಲಂಬಿಸಿ ಭಿನ್ನವಾಗಿರುತ್ತದೆ.ಒಬ್ಬರು ಉನ್ಮಾದದಿಂದ ಕಿರಚಲು ಪ್ರಾರಂಭಿಸಬಹುದು.ಇನ್ನೊಬ್ಬರು ಗರಬಡಿದವರಂತೆ ನಿಲ್ಲಬಹುದು.ಮತ್ತೊಬ್ಬರು ಧೈರ್ಯವನ್ನು ಒಗ್ಗೂಡಿಸಿಕೊಂಡು, ಅಪರಾಧ ಆಗದಂತೆ ತಡೆಯಬಹುದು ಅಥವಾ ಅದನ್ನು ಪೊಲೀಸರಿಗೆ ತಿಳಿಸಬಹುದು.ಆದರೆ, ಸುಮಾರು 14 ಮತ್ತು 15 ವರ್ಷ ವಯಸ್ಸಿನ ಇಬ್ಬರು ಬಾಲಕರು ತಮ್ಮ ತಾಯಿಯು ಹತ್ಯೆಗೀಡಾದುದನ್ನು ಕಣ್ಣಾರೆ ಕಂಡಿದ್ದು, ಅನ್ನ ನೀರಿಲ್ಲದೆ ಸುಮಾರು 24 ಗಂಟೆಗಳ ಕಾಲ ಅಡಗಿಕೊಳ್ಳುತ್ತಾರೆ ಎಂಬುದು ನಂಬಲಸಾಧ್ಯವಾದ ಸಂಗತಿಯಾಗಿದೆ.ಮೊದಲೇ ಅಭಿಪ್ರಾಯಪಡಲಾದಂತೆ, ಆ ಘೋರ ಘಟನೆಯ ಬಗ್ಗೆ ಕನಿಷ್ಟ ಪಕ್ಷ ತಮ್ಮ ತಂದೆಗೆ ತಿಳಿಸಲು ಒಬ್ಬರು ಿ ಇನ್ನೊಬ್ಬರಿಗೆ ಶಕ್ತಿ ನೀಡಬೇಕಾಗಿತ್ತು.ಇದರೊಂದಿಗೆ, ಈ ಘಟನೆಯನ್ನು ಪೊಲೀಸರಿಗೆ ತಿಳಿಸದಿರುವಲ್ಲಿ ಪಿ.ಡಬ್ಲ್ಯು ಅಶ್ 14 ರ ವರ್ತನೆಯು ಪ್ರಾಸಿಕ್ಯೂಷನ್ ವಾದವನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ.

24. ಭಾರತ ಸಾಕ್ಷ್ಯ ಲ್ಯು ಅಧಿನಿಯಮ, 1872 ರ 11 ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

"11. ಅನ್ಯಥಾ ಸುಸ ಂ ಬದ್ಧವಾಗಿರದ ಸ ಂ ಗತಿಗಳು ಸುಸ ಂ ಬದ್ಧವಾಗುವುದು.-ಅನ್ಯಥಾ ಸುಸ ಂ ಬದ್ಧವಾಗಿರದ ಸ ಂ ಗತಿಗಳು,

( 1) ಯಾವುದೇ ವಿವಾದ್ಯ ಸಂಗತಿಗೆ ಅಥವಾ ಸುಸಂಬದ್ಧ ಸ ಂ ಗತಿಗೆ ಅಸಂಗತವಾಗಿದ್ದರೆ;

( 2) ಸ್ವತಃ ಅಥವಾ ಇತರ ಸಂಗತಿಗಳ ಸಂಬಂಧದಿಂದ ಯಾವುದೇ ವಿವಾದ್ಯ ಸಂಗತಿಯ ಅಥವಾ ಸುಸಂಬದ್ಧ

ಸಂಗತಿಂರಂ ಇರುವುದನ್ನು ಅಥವಾ ಇಲ್ಲದಿರುವುದನ್ನು ಅತ್ಯಂತ ಸಂಭವನೀಯ ಅಥವಾ ಅಸಂಭವನೀಯಗೊಳಿಸುವಂತಿದ್ದರೆ ಸುಸಂಬದ್ಧವಾಗಿರುತ್ತವೆ."

ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯದಲ್ಲಿ, ಅನ್ಯಥಾ ಅಪ್ರಸ್ತುತವೆಂದು ತೋರಬಹುದಾದ ಈ ಕೆಳಗಿನ ಸಂಗತಿಗಳು, ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳಲ್ಲಿ ಹಾಗೂ ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಪ್ರಸ್ತುತವಾಗುತ್ತದೆ:

( 6) ಮೃತಳ ಹೊಟ್ಟೆಯಲ್ಲಿದ್ದ ಅರೆ ಜೀರ್ಣವಾದ ಆಹಾರ.

(ii) ತನ್ನ ಹೆಂಡತಿಯ ಸಾವನ್ನು ಪೊಲೀಸರಿಗೆ ವರದಿ ಮಾಡದಿರುವಲ್ಲಿ ಪಿ.ಡಬ್ಲ್ಯು .14 ರ ವರ್ತನೆ.

(iii) ಘಟನೆ ನಡೆದ ಸ್ಥಳದಲ್ಲಿ ಸಂಜೆ ತಡವಾಗಿ, ಪಿ.ಡಬ್ಲ್ಯು .14 ರ ಜೊತೆಯಲ್ಲಿ ಪಿ.ಡಬ್ಲ್ಯು .12 ಮತ್ತು 13 ಇದ್ದರೆಂದು ಪಿ.ಡಬ್ಲ್ಯು .11 ಒಪ್ಪಿಕೊಂಡದ್ದು.

(iv) 30.07.2010 ರ ಸಂಜೆ ಸುಮಾರು 7.00 ಗಂಟೆಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದರೆಂದು ಪಿ.ಡಬ್ಲ್ಯು .11 ಒಪ್ಪಿಕೊಂಡಿದ್ದು.

(v) ದೂರು ದಾಖಲಿಸುವಲ್ಲಿ ಮತ್ತು ಎಫ್ಐಆರ್ ಅನ್ನು ನ್ಯಾಯಾಲಯದ ಮುಂದೆ ಸಲ್ಲಿಸುವಲ್ಲಿ ವಿಪರೀತ ವಿಳಂಬವಾಗಿರುವುದು.

25. ದಾಖಲೆಯಲ್ಲಿ ಇರಿಸಲಾಗಿರುವ ಸಾಕ್ಷ್ಯಾಧಾರಗಳ ಗುಣಾವಗುಣಗಳನ್ನು ವಿಸ್ತೃತವಾಗಿ ಮರು ವಿವೇಚಿಸಿದ ಮೇಲೆ, ಪ್ರತ್ಯಕ್ಷದರ್ಶಿಗಳ ಸಾಕ್ಷ್ಯವು ಸಂಪೂರ್ಣವಾಗಿ ವಿಶ್ವಾಸಾರ್ಹವಲ್ಲ ಹಾಗೂ ಅದನ್ನು ನಂಬಲು ಸಾಧ್ಯವಿಲ್ಲ.ಕ್ರಿಮಿನಲ್ ಪ್ರಾಸಿಕ್ಯೂಷನ್ನಲ್ಲಿ, ಅಪರಾಧ ನಿರ್ಣಯ ಮಾಡಲು ಬೇಕಾದ ಪುರಾವೆಯ ಪ್ರಮಾಣವು ಎಲ್ಲಾ ಸಮಂಜಸವಾದ ಅನುಮಾನಗಳನ್ನು ಮೀರಿದ ಪುರಾವೆಯಾಗಿದೆ.ಹತ್ಯೆಗೆ ಪ್ರತ್ಯಕ್ಷದರ್ಶಿಗಳಾದ ಪಿ.ಡಬ್ಲ್ಯು .12 ಮತ್ತು 13 ರ ಸಾಕ್ಷ್ಯವು ಅವರು ನಿರೂಪಿಸಿದಂತೆ, ಅದನ್ನು ಸಂಪೂರ್ಣವಾಗಿ ಸಾಮಾನ್ಯ ಮನುಷ್ಯನ

ನಡವಳಿಕೆ ಅಥವಾ ವರ್ತನೆಯನ್ನು ಊಹಿಸಲಾಗುವುದಿಲ್ಲ.ಅಸಂಭವನೀಯತೆಗಳು, ಅನುಮಾನಗಳು ಮತ್ತು ವಿಚಿತ್ರತೆಗಳಿಂದ ತುಂಬಿದ್ದು, ಅದನ್ನು ಅಂಗೀಕರಿಸಲಾಗುವುದಿಲ್ಲ ಮತ್ತು ಹೀಗಾಗಿ, ದೋಷನಿರ್ಣಯದ ಆಧಾರವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ.ಇತರ ಸಾಕ್ಷಿದಾರರ ಸಾಕ್ಷ್ಯಗಳು ಅವುಗಳ ಮುಖಬೆಲೆಯ ಮೇಲೆ ತೆಗೆದುಕೊಂಡರೂ ಸಹ, ಸಮಂಜಸವಾದ ಎಲ್ಲಾ ಅನುಮಾನಗಳನ್ನು ಮೀರಿ, ಆರೋಪದ ಪುರಾವೆಯ ಅಗತ್ಯತೆಗೆ ಕೊರತೆಯಾಗುತ್ತದೆ.

26. ಪರಿಣಾಮವಾಗಿ, ಅಪೀಲುದಾರರು ಸಂಶಯದ ಲಾಭಕ್ಕೆ ಅರ್ಹರಾಗಿದ್ದಾರೆ.ಅಧಿವಿಚಾರಣಾ ನ್ಯಾಯಾಲಯವು ತೆಗೆದುಕೊಂಡ ವ್ಯತಿರಿಕ್ತ ದೃಷ್ಟಿಕೋನವು, ದಾಖಲೆಯಲ್ಲಿರುವ ಸಾಕ್ಷ್ಯಗಳ ಪ್ರಮಾಣ ಮತ್ತು ಈ ಮೇಲೆ ಉಲ್ಲೇಖಿಸಿದ ನಿರ್ಧಾರಗಳಿಂದ ದೃಢೀಕರಿಸಲ್ಪಟ್ಟ ಕಾನೂನಿನ ವ್ಯಾಖ್ಯಾನಕ್ಕೆ ವಿರುದ್ಧವಾಗಿದೆ.

27. ತತ್ಪರಿಣಾಮವಾಗಿ, ಅಪೀಲು ಯಶಸ್ವಿಯಾಗಿದ್ದು, ಅದನ್ನು ಪುರಸ್ಕರಿಸಲಾಗಿದೆ.ಪ್ರಶ್ನಿತ ತೀರ್ಪನ್ನು ರದ್ದುಗೊಳಿಸಲಾಗಿದೆ.ಅದರ ಪರಿಣಾಮವಾಗಿ, ಅಪೀಲುದಾರರನ್ನು ಖುಲಾಸೆಗೊಳಿಸಲಾಗಿದೆ ಹಾಗೂ ಬೇರೆ ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ಅಗತ್ಯವಿಲ್ಲದಿದ್ದರೆ, ಅವರನ್ನು ಮುಕ್ತಗೊಳಿಸಲು ಆದೇಶಿಸಲಾಗಿದೆ.